# <u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಕುಣಿಗಲ್.</u>

## <u>ಸಿ.ಸಿ. 1509/2024</u>

ಪಿರ್ಯಾದಿಃ ಹುಲಿಯೂರುದುರ್ಗ ಪೊಲೀಸ್

ವಿರುದ್ಧ

ಆರೋಪಿಃ ಮಂಜುನಾಥ
ಬಿನ್ ಲೇಟ್ ಗಂಗಸಿದ್ದಯ್ಯ
ವಯಸ್ಸು **45** ವರ್ಷಗಳು,
ವಾಸ- ಹೊಸಪೇಟೆ ಗ್ರಾಮ,
ಮಾಗಡಿ ಟೌನ್, ರಾಮನಗರ ಜಿಲ್ಲೆ.

## ಆಪಾದನೆಃ

ದಿನಾಂಕ-25.05.2024 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಹುಲಿಯೂರುದುರ್ಗ ಪೋಲಿಸ್ ಠಾಣಾ ಸರಹದ್ದು ಚೌಡನಕುಪ್ಪೆ ಗ್ರಾಮದ ಹಳೇ ರೇಷ್ಮೇ ಫಾರ್ಮ ಮುಂಭಾಗದಲ್ಲಿ ಹಾದು ಹೋಗಿರುವ ಮಾಗಡಿ-ಹುಲಿಯೂರದುರ್ಗ ಸಾರ್ವಜನಿಕ ರಸ್ತೆಯಲ್ಲಿ ಆರೋಪಿಯಾದ ನೀವು ನಿಮ್ಮ ಬಾಬ್ತು KA-42/TA-2314 ನೇ ಟ್ರಾಕ್ಟರ್ ಮತ್ತು KA-42/TA-2315 ನ ಟ್ರೈಲರ್ ವಾಹನದ ಚಾಲಕನಾಗಿದ್ದು, ಸದರಿ ಟ್ರ್ಯಾಕ್ಟರ್ ಮತ್ತು ಟ್ರೈಲರ್ ವಾಹನವನ್ನು ಚೌಡನಕುಪ್ಪೆಯ ಕಡೆಗೆ ಮುಖ ಮಾಡಿ ರಸ್ತೆಯ ಮಧ್ಯದಲ್ಲಿ ಯಾವುದೇ ಬೀದಿ ದೀಪಗಳು ಇಲ್ಲದ ಸ್ಥಳದಲ್ಲಿ, ಯಾವುದೇ ಇಂಡಿಕೇಟರ್ ಹಾಕದೇ, ಟ್ರ್ಯಾಕ್ಟರ್ ನಿಂತಿದೆ ಎಂದು ಕಾಣುವಂತಹ ಯಾವುದೇ ಗುರುತುಗಳನ್ನು ಹಾಕದೇ, ರಿಪ್ಲೇಕ್ಟರ ಗಳನ್ನು ಹಾಕದೇ, ಯಾವುದೇ ಮುಂಜಾಗ್ರತೆ ಕ್ರಮವನ್ನು ವಹಿಸದೇ ರಸ್ತೆಯಲ್ಲಿ ಇತರೇ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗುವಂತೆ ನಿರ್ಲಕ್ಷತೆಯಿಂದ ಟ್ರ್ಯಾಕ್ಟರ್ ಮತ್ತು ಟ್ರೈಲರ್ ವಾಹನವನ್ನು ನಿಲ್ಲಿಸಿದ್ದು , ಆ ಮೂಲಕ ಭಾ.ದಂ.ಸಂ. 283 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆಯನ್ನು ಸಲ್ಲಿಸಿರುತ್ತಾರೆ

ಮುಂದುವರೆದು ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಮಾಗಡಿ ಕಡೆಯಿಂದ ಹುಲಿಯೂರದುರ್ಗದ ಕಡೆಗೆ ಹೋಗಲು ಬಂದ KA-02/KX-5517 ನೇ ಬೈಕಿನ ಸವಾರ ಕೆ.ಎಂ ಉಮೇಶನಿಗೆ ರಾತ್ರಿ ವೇಳೆಯಾಗಿದ್ದರಿಂದ ರಸ್ತೆಯಲ್ಲಿ ನಿಲ್ಲಿಸಿದ್ದ ಟ್ರ್ಯಾಕ್ಟರ್ ಮತ್ತು ಟ್ರೈಲರ ವಾಹನ

ಗೋಚರಿಸದೇ ಸದರಿ ಟ್ರಾಕ್ಟರ್ ನ ಟ್ರೈಲರ್ ಹಿಂಭಾಗಕ್ಕೆ ಡಿಕ್ಕಿ ಹೊಡೆದು ರಸ್ತೆಯಲ್ಲಿಯೇ ಬಿದ್ದಿದ್ದರಿಂದ ಉಮೇಶನಿಗೆ ತಲೆಗೆ, ಮೈ , ಕೈ , ಕಾಲುಗಳಿಗೆ ತೀವ್ರ ತರಹದ ರಕ್ತ ಗಾಯಗಳಾಗಿ ಸ್ಥಳದಲ್ಲಿಯೇ ಮರಣ ಹೊಂದಿದ್ದು, ಆ ಮೂಲಕ ಭಾ.ದಂ.ಸಂ.304(A) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಪಘಾತದ ವಿಚಾರವನ್ನು ಸ್ಥಳೀಯ ಪೋಲಿಸರಿಗೆ ತಿಳಿಸದೇ ಹಾಗೂ ಗಾಯಾಳುವಿನ ಚಿಕಿತ್ಸೆಗೆ ನೆರವಾಗದೇ ಅಪಘಾತದ ಸ್ಥಳದಿಂದ ನಿಮ್ಮ ವಾಹನವನ್ನು ತೆಗೆದುಕೊಂಡು ಹೋಗಿದ್ದು, ಆ ಮೂಲಕ ಮೋ.ವಾ.ಕಾ. ಕಲಂ 134(ಎ) (ಬಿ) ಸಹವಾಚಕ 187 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆಯನ್ನು ಸಲ್ಲಿಸಿರುತ್ತಾರೆ.

ಪ್ರಶ್ನೆಃ **1-** ಓದಿ ಹೇಳಿದ್ದು ಅರ್ಥವಾಯಿತೆ?

ಉತ್ತರಃ

ಪ್ರಶ್ನೆಃ **2-** ನೀವು ಅಪರಾಧವನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ವಿಚಾರಣೆಯಾಗಬೇಕೆ?

ಉತ್ತರಃ

(ಮೇಲಿನಂತೆ ಆರೋಪಣೆ ಓದಿ ಹೇಳಿ ಆರೋಪಿ ನೀಡಿದ ಉತ್ತರ ಬರೆಯಲಾಗಿದೆ.)

**Sd/-**

ದಿಃ 11.02.2025

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಕುಣಿಗಲ್.